**ದಿನಾಂಕಃ 26-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

ನಿ.ಪಿ-9 : ಆಧಾರ ಕಾರ್ಡನ ನೋಟರೈಜ್ಡ ಪ್ರತಿ,
(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ನಿ.ಪಿ-10 : ಪಾನ್ ಕಾರ್ಡನ ನೋಟರೈಜ್ಡ ಪ್ರತಿ, (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ನಿ.ಪಿ-11 : ಬ್ಯಾಂಕ್ ಪಾಸ್ ಬುಕ್ ನ ನೋಟರೈಜ್ಡ ಪ್ರತಿ,
(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.M.B.A ವಕೀಲರಿಂದಃ**

1. ನಾನು ಮತ್ತು ನನ್ನ ಮಗ ಬೈಕ್ ನಲ್ಲಿ ಹೊರಟಿದ್ದೆವು. ನನ್ನ ಮಗ ಬೈಕ್ ಚಲಾಯಿಸುತ್ತಿದ್ದ, ನಾನು ಹಿಂಬದಿ ಸವಾರನಾಗಿ ಕುಳಿತಿದ್ದೆನು. ನನ್ನ ಮಗ ಆ ದಿನ ನಿಧಾನವಾಗಿ ಬೈಕ್ ಚಲಾಯಿಸುತ್ತಿದ್ದ ಎಂದರೆ ಸರಿ. ಎದುರಿನಿಂದ ಬರುತ್ತಿದ್ದ ಮೋಟಾರ್ ಸೈಕಲ್ ನಲ್ಲಿ 3 ಜನ ಕುಳಿತುಕೊಂಡು ಬಹಳ ವೇಗವಾಗಿ ಬರುತ್ತಿತ್ತು ಎಂದರೆ ಸರಿ. ವೇಗವಾಗಿ ಬಂದು, ನನ್ನ ಮಗನ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿದ್ದರಿಂದ ಈ ಅಪಘಾತ ಆಗಿದೆ ಎಂದರೆ ಸರಿ. ಈ ಅಪಘಾತ ದಲ್ಲಿ ನನ್ನ ಮಗನ ಯಾವುದೇ ತಪ್ಪು ಇಲ್ಲ ಎಂದರೆ ಸರಿ. ಬೈಕ್ ಚಲಾಯಿಸಲು ನನ್ನ ಮಗನಿಗೆ ಚಾಲನಾ ಪರವಾನಿಗೆ ಇರುತ್ತದೆ ಎಂದರೆ ಸರಿ. ನನ್ನ ಮಗನ ಬೈಕ್ ಗೆ ಇನ್ಸುರೆನ್ಸ ಇರುತ್ತದೆ ಎಂದರೆ ಸರಿ. ಅಪಘಾತ ಸಮಯದಲ್ಲಿ ನನ್ನ ಮಗನ ಮೋಟಾರ್ ಸೈಕಲ್ ಗೆ ವಿಮಾ ಪಾಲಸಿ ಚಾಲ್ತಿಯಲ್ಲಿರುವುದರಿಂದ ಮತ್ತು ಚಾಲನಾ ಪರವಾನಿಗೆ ಇರುವುದರಿಂದ 2 ರಿಂದ 4 ನೇ ಎದುರುದಾರರೇ ನನಗೆ ಪರಿಹಾರ ಕೊಡಲು ಬಾಧ್ಯರಾಗಿರುತ್ತಾರೆ ಎಂದರೆ ಸರಿ. 1 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್ ಎಸ್ ಕೆ ವಕೀಲರಿಂದಃ**

1. ನಾನು ಯಾವ ದಿನಾಂಕ ಹುಟ್ಟಿರುತ್ತೇನೆ ಎಂದು ನನಗೆ ಈಗ ನೆನಪಿರುವುದಿಲ್ಲ. ನಿಪಿ-10

ಪಾನ್ ಕಾರ್ಡನಲ್ಲಿ ನನ್ನ ಹುಟ್ಟಿದ ದಿನಾಂಕ 01–01–1943 ಎಂದು ನಮೂದಿದೆ ಎಂದರೆ ಸರಿ. ಅದೇ ರೀತಿ ನನ್ನ ಆಧಾರ ಕಾರ್ಡನಲ್ಲಿ ಸಹ 01–01–1943 ಎಂದು ನಮೂದಿರುತ್ತದೆ ಎಂದರೆ ಸರಿ. ನನ್ನ ಕೆನರಾ ಬ್ಯಾಂಕ್ ಪಾಸ್ ಬುಕ್ ನಲ್ಲೂ ಸಹ ಅದೆ ನಮೂದಾಗಿರುತ್ತದೆ ಎಂದರೆ ಸರಿ.

2. ಅಪಘಾತ ಎರಡು ಮೋಟಾರ್ ಸೈಕಲ್ ನಡುವೆ ಆಗಿದೆ ಎಂದರೆ ಸರಿ. ನಾನು ಹೋಗುತ್ತಿದ್ದ ಮೋಟಾರ್ ಸೈಕಲ್ ನಂಬರ್ ನನಗೆ ಈಗ ಹೇಳಲಾಗುವುದಿಲ್ಲ. ಅಪಘಾತ ಪಡಿಸಿದ ಮೋಟಾರ್ ಸೈಕಲ್ ನಂಬರ್ ಈಗ ಹೇಳಲಾಗುವುದಿಲ್ಲ. ನಮ್ಮ ಮೋಟಾರ್ ಸೈಕಲ್ ನಲ್ಲಿ ನಾನು ಮತ್ತು ನನ್ನ ಮಗ ಇಬ್ಬರೆ ಇದ್ದೆವು. ಎದುರಿನಿಂದ ಬರುತ್ತಿದ್ದ ಮೋಟಾರ್ ಸೈಕಲ್ ನಲ್ಲಿ 3 ಜನ ಇದ್ದರು. ನಾನು ಮೋಟಾರ್ ಸೈಕಲ್ ನಲ್ಲಿ ಎರಡು ಸಿಲಿಂಡರ್ ಗ್ಯಾಸಗಳನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಹೋಗುತ್ತಿದ್ದೆ ಎಂದರೆ ಸಾಕ್ಷಿ ಒಂದೇ ಸಿಲಿಂಡರ್ ಗ್ಯಾಸ್ ಹಿಡಿದುಕೊಂಡಿದ್ದೆ ಎಂದು ಹೇಳುತ್ತಾರೆ.

3. ಪೋಲಿಸ್ ದಾಖಲೆಯಲ್ಲಿ ಬರೆದ ವಿಚಾರಗಳು ನಿಜವಾಗಿರುತ್ತವೆ. ಪೋಲಿಸರು ಎರಡೂ ವಾಹನಗಳ ಚಾಲಕರ ತಪ್ಪಿನಿಂದ ಅಪಘಾತ ಆಗಿದೆ ಎಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಾವು ರಸ್ತೆಯ ಬದಿಯಲ್ಲಿ ಹೋಗುತ್ತಿದ್ದೆವು ಎಂದು ಹೇಳುತ್ತಾರೆ. ಕೆಎ 15 ಇ ಬಿ 8043 ಮೋಟಾರ್ ಸೈಕಲ್ ಚಾಲಕ ರಾಘವೇಂದ್ರ ನಾಯ್ಕ ವಿರುದ್ಧ ಬೈಕ್ ಚಲಾಯಿಸಲು ಚಾಲನಾ ಪರವಾನಿಗೆ ಇರಲಿಲ್ಲ ಎಂದು ಪೋಲಿಸರು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಪೋಲಿಸರ ಜೊತೆ ಮಿಲಾಪೆಯಾಗಿ A+B ದೋಷಾರೋಪಣೆ ಪಟ್ಟಿ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ 3 ನೇ ಎದುರುದಾರರ ತಪ್ಪಿನಿಂದ ಆಗಿದೆ ಎಂದರೆ ಸರಿ. 3 ನೇ ಎದುರುದಾರರಿಗೆ ಬೈಕ್ ಚಲಾಯಿಸಲು ಡಿ ಎಲ್ ಇರದ ಕಾರಣ ಪೋಲಿಸರ ಜೊತೆ ಮಿಲಾಪೆಯಾಗಿ ಎರಡೂ ಮೋಟಾರ್ ಸೈಕಲ್ ಗಳ ಮೇಲೆ ಚಾರ್ಜ ಶೀಟ್ ಹಾಕಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

4. ಅಪಘಾತ ಆದ ತಕ್ಷಣ ನಾನು ಶಿಕಾರಿಪುರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತೇನೆ ಎಂದರೆ ಸರಿ. ಅಲ್ಲಿಂದ ನನ್ನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿದ್ದರು ಎಂದರೆ ಸರಿ. ಶಿಕಾರಿಪುರ ಆಸ್ಪತ್ರೆ ಮತ್ತು ಮೆಗ್ಗಾನ್ ಆಸ್ಪತ್ರೆ ಸರ್ಕಾರಿ ಆಸ್ಪತ್ರೆ ಗಳು ಎಂದರೆ ಸರಿ. ಆಸ್ಪತ್ರೆಯಲ್ಲಿ ನನಗೆ ಮತ್ತು ನನ್ನ ನೋಡಿಕೊಳ್ಳಲು ಇದ್ದ ನನ್ನ ಹೆಂಡತಿಗೆ ಉಚಿತ ಊಟ, ವಸತಿ ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-8 ಮೆಡಿಕಲ್ ಬಿಲ್ ಗಳನ್ನು ಹೊರತು ಪಡಿಸಿ, ಬೇರೆ ಯಾವುದೇ ಹಣವನ್ನು ಚಿಕಿತ್ಸೆಗಾಗಿ ಖರ್ಚು ಮಾಡಿಲ್ಲ ಎಂದರೆ ಸಾಕ್ಷಿ ಹೊರಗಡೆ ಮೆಡಿಸಿನ್ ಖರೀದಿ ಮಾಡಿರುತ್ತೇವೆ ಎಂದು

ಹೇಳುತ್ತಾರೆ. ಚಿಕಿತ್ಸೆಗಾಗಿ 2 ಲಕ್ಷ 60 ಸಾವಿರ ಖರ್ಚು ಮಾಡಿರುತ್ತೇನೆ ಮತ್ತು ಮುಂದುವರೆದ ಚಿಕಿತ್ಸೆಗಾಗಿ 1 ಲಕ್ಷ 10 ಸಾವಿರ ಬೇಕು ಎಂದು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಈ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು 2 ಬಾರಿ ಬಂದಿರುತ್ತೇನೆ. ಶಿಕಾರಿಪುರ ತಾಲೂಕು ಬಗನಿಕಟ್ಟೆ ಗ್ರಾಮ ನನ್ನ ಖಾಯಂ ವಿಳಾಸ ಆಗಿರುತ್ತದೆ. ಸಾಕ್ಷಿ ಮುಂದುವರೆದು ರಾಣೇಬೆನ್ನೂರಿನ ಮಾರುತಿ ನಗರದಲ್ಲಿ ವಾಸವಾಗಿರುತ್ತೇನೆ ಎಂದು ಹೇಳುತ್ತಾರೆ.

5. ನನಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. 4 ಜನ ಮೊಮ್ಮಕ್ಕಳು ಇರುತ್ತಾರೆ. ಇಬ್ಬರೂ ಮಕ್ಕಳು ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಮತ್ತು ನನ್ನ ಹೆಂಡತಿ ಮೊಮ್ಮಕ್ಕಳನ್ನು ನೋಡಿಕೊಂಡು ಮನೆಯಲ್ಲಿಯೇ ಇರುತ್ತೇವೆ ಎಂದರೆ ಸರಿ. ನಾನು 25 ಸಾವಿರ ತಿಂಗಳಿಗೆ ದುಡಿಯುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ 1200 ರೂಪಾಯಿ ವೃದ್ದಾಪ್ಯ ವೇತನ ಬರುತ್ತದೆ. ನನ್ನ ಹೆಂಡತಿಗೂ ಸಹ ವೃದ್ದಾಪ್ಯ ವೇತನ ಬರುತ್ತದೆ. ನನ್ನ ಹೆಂಡತಿಗೆ ಗೃಹಲಕ್ಷ್ಮಿ ಯೋಜನೆಯಿಂದ ತಿಂಗಳಿಗೆ 2000/- ಬರುತ್ತದೆ. ನಾನು ಹಿರಿಯ ನಾಗರಿಕನಾಗಿರುವುದರಿಂದ ಸರ್ಕಾರ ಕೊಡುವ ವೃದ್ದಾಪ್ಯ ವೇತನದ ಮೇಲೆ ಅವಲಂಬಿತನಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಬರೆದಿರುವ ಅಂಶಗಳ ಬಗ್ಗೆ ಪೋಲಿಸ್ ದಾಖಲೆ ಬಿಟ್ಟು ಬೇರೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ.

**ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀ.ವಿ ಎಸ್ ಎ ವಕೀಲರಿಂದಃ**

1. ನನ್ನ ಮಗನೇ ವೇಗವಾಗಿ ಬೈಕ್ ಚಲಾಯಿಸಿ ಮುಂದೆ ಬರುತ್ತಿದ್ದ ಬೈಕ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಮಗನ ತಪ್ಪು ಇಲ್ಲ ಎಂದು ಪೋಲಿಸರ ದಾಖಲೆ ಏನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪೋಲಿಸ್ ದಾಖಲೆ ಹಾಜರು ಪಡಿಸಿರುತ್ತೇನೆ. ಪೋಲಿಸ್ ದಾಖಲೆಯಲ್ಲಿ ನನ್ನ ಮಗನ ತಪ್ಪು ಸಹ ಇತ್ತು ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಎದುರಿನಿಂದ ಬರುತ್ತಿದ್ದ ಮೋಟಾರ್ ಸೈಕಲ್ ನಿಧಾನವಾಗಿ ಸಾವಕಾಶವಾಗಿ ಬರುತ್ತಿದ್ದು ನನ್ನ ಮಗನೇ ಹೋಗಿ ಆ ಬೈಕ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಸಂಪೂರ್ಣವಾಗಿ ನನ್ನ ಮಗನ ತಪ್ಪಿನಿಂದಲೆ ಆಗಿರುವುದರಿಂದ 4 ನೆ ಎದುರುದಾರರ ಕಂಪನಿಯವರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.